**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳೆನರಸೀಪುರ**

ಫ್ರಾಸ –11

**CC No**: 41/2020 ಚಾಸ– 12

| | |
|---|---|
| ಹೆಸರು | **ಕೃಷ್ಣ ಎಸ್ ಕೆ** |
| ತಂದೆ ಹೆಸರು | **ಲೇಟ್ ಕೆಂಚೇಗೌಡ** |
| ವಯಸ್ಸು | **49 ವರ್ಷ** |
| ಉದ್ಯೋಗ | **ಪೊಲೀಸ್ ಇನ್ಸ್‌ಪೆಕ್ಟರ್** |
| ವಾಸಸ್ಥಳ | **ಬೆಂಗಳೂರು** |

ದಿನಾಂಕಃ 23.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ–**

ನಾನು ದಿಃ 27.12.2017 ರಿಂದ 10.11.2020 ರವರಗೆ ಶಾಂತಿಗ್ರಾಮ ಪೊಲೀಸ್ ಠಾಣೆಯಲ್ಲಿ ಉಪ ನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 15.12.2019 ರಂದು ಬೆಳಗೆ 9.00 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ನಂದೀಶ್ ಬಿನ್ ಸಣ್ಣೇಗೌಡ ಎಂಬುವವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಶಾಂತಿಗ್ರಾಮ ಠಾಣಾ ಮೊಕದ್ದಮೆ ನಂ.142/2019 ರಂತೆ ಪ್ರಕರಣದ ದಾಖಲಿಸಿಕೊಂಡು ಪ್ರ ವ ವರದಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಂತರ ದಿಃ 03.01.2020 ರಂದು ಪ್ರಕರಣದ ತನಿಖೆಯನ್ನು ಮುಂದುವರೆಸಿ ಹಾಸನದ ಗ್ರಾಮಾಂತರ

ವೃತ ನೀರಿಕ್ಷಕರಾದ ಚಾಸಾ 13 ರವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಮತ್ತು ಮಾಲು ಪತ್ತೇಗಾಗಿ ನನ್ನನ್ನು ಮತ್ತು ಚಾಸಾ 7, 8, 9, 10 ರವರನ್ನು ನೇಮಿಸಿದ್ದು, ಆ ಪ್ರಕಾರ ನಾವೆಲ್ಲರೂ ಶಾಂತಿಗ್ರಾಮ ಸರಹದ್ದಿನ ಗ್ರಾಮಗಳಲ್ಲಿ ಗಸ್ತು ಮಾಡಿಕೊಂಡು ಸಂಜೆ ಸುಮಾರು 6.30 ಗಂಟೆಗೆ ಹಲಿಸಿನಹಳ್ಳಿ- ಮಳಲಿ ಕ್ರಾಸ್ ಹತ್ತಿರ ಗಸ್ತಿನಲ್ಲಿರುವಾಗ ಮೊಸಳೆಹೊಸಹಳ್ಳಿ ಕಡೆಯಿಂದ ಬಂದ ಕೆಎ - 09-ಎನ್-1703 ನಂಬರಿನ ಕಾರನ್ನು ತಡೆದು ಚಾಲಕನ ಹೆಸರು ಮತ್ತು ವಿಳಾಸ ಕೇಳಲಾಗಿ ಆತ ತನ್ನ ಹೆಸರನ್ನು ಶಕೀರ್ ಬಿನ್ ಲೇಟ್ ಅಸ್ಲಂ ಪಾಷ, ಹಳೇತಾಲ್ಲೂಕು ಗ್ರಾಮ, ಮಡಿಕೇರಿ ಜಿಲ್ಲೆ ಎಂದು ತಿಳಿಸಿದ್ದು, ಸದರಿ ಕಾರಿನಲ್ಲಿದ್ದ ಇಬ್ಬರು ವ್ಯಕ್ತಿಗಳ ಬಗ್ಗೆ ವಿಚಾರಿಸಲಾಗಿ ಅವರು ತಮ್ಮ ಹೆಸರುಗಳನ್ನು ಇಲಿಯಾಜ್ ಪಾಷ ಉಃ ಇಲಿಯಾಜ್ ಬಿನ್ ಸಿರಾಜ್ ಪಾಷ, ಹಲಗನಹಳ್ಳಿ ಗ್ರಾಮ, ಬೆಟ್ಟದಪುರ ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕು ಮತ್ತು ಇನ್ನೊಬ್ಬರ ಹೆಸರನ್ನು ಅರುಣ್ ಬಿನ್ ಜಯ, ಹಳೇತಾಲ್ಲೂಕು ಗ್ರಾಮ, ನೊಪೊಕ್ಲು ಹೋಬಳಿ, ಮಡಿಕೇರಿ ತಾಲ್ಲೂಕು ಎಂದು ತಿಳಿಸಿದರು. ಅದೇ ಸಮಯಕ್ಕೆ ಮೊಸಳೆ ಹೊಸಹಳ್ಳಿ ಕಡೆಯಿಂದ ಇನ್ನೊಂದು ಕೆಎ 04-ಎಂ.ಸಿ.0800 ನಂಬರಿನ ಕಾರಿನ ಚಾಲಕ ನಮ್ಮನ್ನು ನೋಡಿ ಕಾರನ್ನು ನಿಲ್ಲಿಸಿ ಚಾಲಕ ಓಡಿ ಹೋಗಿದ್ದು, ಕಾರಿನಲ್ಲಿದ್ದ ಮತ್ತೊಬ್ಬನನ್ನು ವಿಚಾರಿಸಲಾಗಿ ತನ್ನ ಹೆಸರನ್ನು ಇಬ್ರಾಹಿಂ ಬಿನ್ ಖಾದರ್, ಹಳೇತಾಲ್ಲೂಕು ಗ್ರಾಮ, ನೊಪೊಕ್ಲು ಹೋಬಳಿ, ಮಡಿಕೇರಿ ತಾಲ್ಲೂಕು ಎಂದು ತಿಳಿಸಿದ್ದು, ಓಡಿ ಹೋದ ಚಾಲಕನ ಬಗ್ಗೆ ವಿಚಾರಿಸಲಾಗಿ ಆತನ ಹೆಸರು ಸುಮೀರ್ ಅಹಮದ್ ಅಲಿಯಾಸ್ ಸುಮೀರ್ ಅಲಿಯಾಸ್ ಸುಮು ಬಿನ್ ಬಶೀರ್, ಹಲಗನಹಳ್ಳಿ ಗ್ರಾಮ, ಬೆಟ್ಟದಪುರ ಹೋಬಳಿ, ಪಿರಿಯಪಾಟ್ಟಣ ತಾಲ್ಲೂಕು ಎಂಬುದಾಗಿ ತಿಳಿಸಿದರು. ಸದರಿ ಯವರನ್ನು ಕಾರಿನಲ್ಲಿ ತೆರಳುತಿದ್ದರ ಬಗ್ಗೆ ವಿಚಾರಿಸಲಾಗಿ ಅವರು ಯಾವುದೇ ಸಮಂಜಸವಾದ ಉತ್ತರವನ್ನು ಕೊಡಲಿಲ್ಲ. ನಂತರ ಅನುಮಾನದ ಮೇಲೆ ಕಾರುಗಳ

ಸಮೇತ 4 ಜನರನ್ನು ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆಗಾಗಿ ಚಾಸಾ 13 ರವರ ಮುಂದೆ ಹಾಜರುಪಡಿಸಿರುತ್ತೇನೆ.

ನಂತರ ದಿಃ 06.01.2020 ರಂದು ಆರೋಪಿತರನ್ನು ಚಾಸಾ 13 ರವರು ನ್ಯಾಯಾಲಯದ ಅನುಮತಿಯ ಮೇರೆಗೆ ಪೊಲೀಸ್ ವಶಕ್ಕೆ ತೆಗೆದುಕೊಂಡಿದ್ದು, ಸದರಿ ಆರೋಪಿಗಳ ಭದ್ರತೆಯ ಜವಬ್ದಾರಿಯನ್ನು ನನಗೆ ವಹಿಸಿದ್ದು, ಆರೋಪಿಗಳು ವಿಚಾರಣಾ ಸಮಯದಲ್ಲಿ ಚಾಸಾ 13 ರವರ ಮುಂದೆ ಸ್ವಇಚ್ಛಾ ಹೇಳಿಕೆಗಳನ್ನು ನೀಡಿದ್ದು, ಅದರ ಪ್ರಕಾರ ಆರೋಪಿಗಳು ಕರೆದುಕೊಂಡ ಹೋದ ಜಾಗದಲ್ಲಿ ಮಹಜರ್ ಮಾಡುವಂತೆ ಹಾಗೂ ಆರೋಪಿಗಳು ಹಾಜರುಪಡಿಸಿದ ಸ್ವತ್ತುಗಳನ್ನು ಜಪ್ತಿಪಡಿಸಿಕೊಳ್ಳುವಂತೆ ನನಗೆ ಚಾಸಾ 13 ರವರು ನನಗೆ ನಿರ್ದೇಶನ ಮಾಡಿರುತ್ತಾರೆ. ಸ್ವಇಚ್ಛಾ ಹೇಳಿಕೆಗಳಲ್ಲಿ ಮೈಸೂರಿನ ಶಾಂತಿನಗರದ ಎ1 ಮಟನ್ ಸ್ಟಾಲ್, ಕಡವಿಬಾಚನಹಳ್ಳಿ, ದೇವರಮುದ್ದನಹಳ್ಳಿ, ಯಡೇಗೌಡನಹಳ್ಳಿ,, ಅರಕಲಗೂಡು ಠಾಣಾ ಸರಹದ್ದಿನ ಚಿಕ್ಕಗಾವನಹಳ್ಳಿ,, ಶ್ರವಣಬೆಳಗೊಳ ಠಾಣಾ ಸರಹದ್ದಿನ ಹಡೇನಹಳ್ಳಿ, ಚನ್ನರಾಯಪಟ್ಟಣ ಠಾಣಾ ಸರಹದ್ದಿನ ಚಿಕ್ಕಗೊಂಡನಹಳ್ಳಿ, ಚನ್ನರಾಯಪಟ್ಟಣ ಗ್ರಾಮಾ ಸರಹದ್ದಿನ ಬಳದರೆ, ಬಾಣಾವರ ಸರಹದ್ದಿನ ಚಲುವನಹಳ್ಳಿ, ತೆರ್ಪೆಗೌಡನಹಟ್ಟಿ ಗಂಡಸಿ ಠಾಣಾ ಸರಹದ್ದಿನ ಗಂಡಸಿ, ಬಸವಪುರದಹಟ್ಟಿ ನುಗ್ಗೆಹಳ್ಳಿ ಠಾಣಾ ಸರಹದ್ದಿನ ಅತ್ತೀಹಳ್ಳಿ ಮತ್ತು ಸಂತೇಶಿವರ ಗ್ರಾಮಗಳಲ್ಲಿ ಮಹಜರ್ ಮಾಡುವಂತೆ ಚಾಸಾ 13 ರವರು ನನಗೆ ನಿರ್ದೇಶನ ನೀಡಿ ಆರೋಪಿತರನ್ನು ದಿಃ 18.01.2020 ರಂದು ವಾಪಸ್ ತಂದು ಹಾಜರುಪಡಿಸುವಂತೆ ತಿಳಿಸಿದರು.

ಆ ಮೇರೆಗೆ ನಾನು ದಿಃ 07.01.2020 ರಂದು ತನಿಖೆಯನ್ನು ಮುಂದುವರೆಸಿ 2ನೇ ಆರೋಪಿ ನಮ್ಮನ್ನು ಹೊಳೆನರಸೀಪುರ ತಾಲ್ಲೂಕು, ಹಳ್ಳಿಮೈಸೂರು ಹೋಬಳಿ, ದೇವರಮುದ್ದನಹಳ್ಳಿ ಗ್ರಾಮದ ಚಾಸಾ 1 ರವರ ವಾಸದ ಮನೆಯ ಉತ್ತರ ಭಾಗದಲ್ಲಿರುವ ಕೊಟ್ಟಿಗೆಯ ಮುಂದೆ ಕರೆದುಕೊಂಡು ಹೋಗಿದ್ದು, ಪಂಚರಾದ ಚಾಸಾ 6 ಮತ್ತು 7 ರವರ ಸಮಕ್ಷಮ 2ನೇ ಆರೋಪಿ ಇದೇ ಸ್ಥಳದಲ್ಲಿ ತಾನು ಉಳಿದ ಆರೋಪಿತರೊಂದಿಗೆ ಕುರಿಗಳನ್ನು ಕಳ್ಳತನ ಮಾಡಿರುವುದಾಗಿ ತಿಳಿಸಿದ್ದು, ಬೆಳಗ್ಗೆ 7.30 ರಿಂದ 7.45 ರವರಗೆ ನಾನು ಸ್ಥಳ ಮಹಜರ್ ಕ್ರಮ ಜರುಗಿಸಿರುತ್ತೇನೆ. ಅದೇ ದಿನ ಚಾಸಾ 6 ಮತ್ತು 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

ದಿಃ 08.01.2020 ರಂದು ಪ್ರಕರಣದ ತನಿಖೆಯನ್ನು ಮುಂದುವರೆಸಿ ಚಾಸಾ 13 ರವರು ನೀಡಿದ ನಿರ್ದೇಶನದ ಮೇರೆಗೆ ಆರೋಪಿತರು ತೋರಿಸಿದ ಹಾಗೂ ಚಾಸಾ 13 ರವರು ನಿವೇದನಾ ಪತ್ರದಲ್ಲಿ ಹೇಳಿರುವ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಸ್ಥಳ ಮಹಜರ್ ಕ್ರಮಗಳನ್ನು ಪಂಚರ ಸಮಕ್ಷಮ ಜರುಗಿಸಿ ಪಂಚರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಮದ್ಯಾಹ್ನ 2.00 ಗಂಟೆಗೆ ಚಾಸಾ 13 ರವರ ಮುಂದೆ ಹಾಜರುಪಡಿಸಿರುತ್ತೇನೆ.

ಸಾಕ್ಷಿ ದೂರು, ಎಫ್ ಐ ಆರ್, ಜ್ಞಾಪನಾ ಪತ್ರ ಹಾಗೂ ನಿವೇದನಾ ಪತ್ರಗಳನ್ನು ನೋಡಿ ಗುರುತಿಸಿದ್ದು, ಶಾಂತಿಗ್ರಾಮ ಠಾಣಾ ಮೊಕದ್ದಮೆ ನಂ.142/2019 ನೇ ರದ್ದರ ಪ್ರ.ವ.ವರದಿಯನ್ನು ನಿಪಿ 9 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ 9(ಎ) ಎಂದು, ದೂರನ್ನು ನಿಪಿ 10 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ.10(ಎ) ಎಂದು, ದಿಃ 03.01.2020ರ ನಿವೇದನಾ ಪತ್ರವನ್ನು ನಿಪಿ 11 ಎಂದು, ದಿಃ 06.01.2020ರ ನಿವೇದನಾ ಪತ್ರಗಳನ್ನು ನಿಪಿ 12 ಮತ್ತು 13 ಎಂದು

ಗುರುತಿಸಲಾಯಿತು. ಮಹಜರ್ ಅನ್ನು ಈಗಾಗಲೇ ನಿಪಿ 5 ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ 5(ಡಿ) ಎಂದು ಗುರುತಿಸಲಾಯಿತು. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ವಿ.ಸಿ. ಮೂಲಕ ಹಾಜರಾದ 4ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆ ದಿನ ವಶಪಡಿಸಿಕೊಂಡು ಚಾಸಾ 13 ರವರ ಮುಂದೆ ಹಾಜರುಪಡಿಸಿರುವ ಕಾರುಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀಸವಾಲು ಆರೋಪಿ ಪರ ವಕೀಲರಿಂದ :-**

ದಿಃ 15.12.2019 ರಂದು ಬೆಳಗೆ 9.00 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ನಂದೀಶ್ ಬಿನ್ ಸಣ್ಣೇಗೌಡ ಎಂಬುವವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಸಲ್ಲಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ದಿಃ 03.01.2020 ರಂದು ಪ್ರಕರಣದ ತನಿಖೆಯನ್ನು ಮುಂದುವರೆಸಿ ಹಾಸನದ ಗ್ರಾಮಾಂತರ ವೃತ ನೀರಿಕ್ಷಕರಾದ ಚಾಸಾ 13 ರವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಮತ್ತು ಮಾಲು ಪತ್ತೇಗಾಗಿ ನನ್ನನ್ನು ಮತ್ತು ಚಾಸಾ 7, 8, 9 10 ರವರನ್ನು ನೇಮಿಸಿದರು ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ಆ ಪ್ರಕಾರ ನಾವೆಲ್ಲರೂ ಶಾಂತಿಗ್ರಾಮ ಸರಹದ್ದಿನ ಗ್ರಾಮಗಳಲ್ಲಿ ಗಸ್ತು ಮಾಡಿಕೊಂಡು ಸಂಜೆ ಸುಮಾರು 6.30 ಗಂಟೆಗೆ ಹಲಿಸಿನಹಳ್ಳಿ- ಮಳಲಿ ಕ್ರಾಸ್ ಹತ್ತಿರ ಗಸ್ತಿನಲ್ಲಿರುವಾಗ ಮೊಸಳೆಹೊಸಹಳ್ಳಿ ಕಡೆಯಿಂದ ಬಂದ ಕೆಎ -09-ಎನ್-1703 ನಂಬರಿನ ಕಾರನ್ನು ತಡೆದು ಚಾಲಕನ ಹೆಸರು ಮತ್ತು ವಿಳಾಸ ಕೇಳಲಾಗಿ ಆತ ತನ್ನ ಹೆಸರನ್ನು ಶಕೀರ್ ಬಿನ್ ಲೇಟ್ ಅಸ್ಲಂ ಪಾಷ, ಹಳೇ ತಾಲ್ಲೂಕು ಗ್ರಾಮ, ಮಡಿಕೇರಿ ಜಿಲ್ಲೆ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕಾರಿನಲ್ಲಿದ್ದ ಇಬ್ಬರು ವ್ಯಕ್ತಿಗಳ ಬಗ್ಗೆ ವಿಚಾರಿಸಲಾಗಿ ಅವರು ತಮ್ಮ ಹೆಸರುಗಳನ್ನು ಇಲಿಯಾಜ್ ಪಾಷ ಉಃ ಇಲಿಯಾಜ್

ಬಿನ್ ಸಿರಾಜ್ ಪಾಷ, ಹಲಗನಹಳ್ಳಿ ಗ್ರಾಮ, ಬೆಟ್ಟದಪುರ ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕು ಮತ್ತು ಇನ್ನೊಬ್ಬರ ಹೆಸರನ್ನು ಅರುಣ್ ಬಿನ್ ಜಯ, ಹಳೇತಾಲ್ಲೂಕು ಗ್ರಾಮ, ನೊಪ್ಪೊಕ್ಲು ಹೋಬಳಿ, ಮಡಿಕೇರಿ ತಾಲ್ಲೂಕು ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ಅದೇ ಸಮಯಕ್ಕೆ ಮೊಸಳೆ ಹೊಸಹಳ್ಳಿ ಕಡೆಯಿಂದ ಇನ್ನೊಂದು ಕೆಎ 04-ಎಂ.ಸಿ.0800 ನಂಬರಿನ ಕಾರಿನ ಚಾಲಕ ನಮ್ಮನ್ನು ನೋಡಿ ಕಾರನ್ನು ನಿಲ್ಲಿಸಿ ಚಾಲಕ ಓಡಿ ಹೋಗಿದ್ದು, ಕಾರಿನಲ್ಲಿದ್ದ ಮತ್ತೊಬ್ಬನನ್ನು ವಿಚಾರಿಸಲಾಗಿ ತನ್ನ ಹೆಸರನ್ನು ಇಬ್ರಾಹಿಂ ಬಿನ್ ಖಾದರ್, ಹಳೇತಾಲ್ಲೂಕು ಗ್ರಾಮ, ನೊಪ್ಪೊಕ್ಲು ಹೋಬಳಿ, ಮಡಿಕೇರಿ ತಾಲ್ಲೂಕು ಎಂದು ತಿಳಿಸಿದ್ದು, ಓಡಿ ಹೋದ ಚಾಲಕನ ಬಗ್ಗೆ ವಿಚಾರಿಸಲಾಗಿ ಆತನ ಹೆಸರು ಸುಮೀರ್ ಅಹಮದ್ ಅಲಿಯಾಸ್ ಸುಮೀರ್ ಅಲಿಯಾಸ್ ಸುಮು ಬಿನ್ ಬಶೀರ್, ಹಲಗನಹಳ್ಳಿ ಗ್ರಾಮ, ಬೆಟ್ಟದಪುರ ಹೋಬಳಿ, ಪಿರಿಯಪಾಟ್ಟಣ ತಾಲ್ಲೂಕು ಎಂಬುದಾಗಿ ತಿಳಿಸಿದರು ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಯವರನ್ನು ಕಾರಿನಲ್ಲಿ ತೆರಳುತಿದ್ದರ ಬಗ್ಗೆ ವಿಚಾರಿಸಲಾಗಿ ಅವರು ಯಾವುದೇ ಸಮಂಜಸವಾದ ಉತ್ತರವನ್ನು ಕೊಡಲಿಲ್ಲ ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ನಂತರ ಅನುಮಾನದ ಮೇಲೆ ಕಾರುಗಳ ಸಮೇತ 4 ಜನರನ್ನು ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆಗಾಗಿ ಚಾಸಾ 16 ರವರ ಮುಂದೆ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ.

ನಂತರ ದಿಃ 06.01.2020 ರಂದು ಆರೋಪಿಗಳ ಭದ್ರತೆಯ ಜವಬ್ದಾರಿಯನ್ನು ನನಗೆ ವಹಿಸಿದರು ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ವಿಚಾರಣಾ ಸಮಯದಲ್ಲಿ ಚಾಸಾ 16 ರವರ ಮುಂದೆ ಸ್ವಇಚ್ಛಾ ಹೇಳಿಕೆಗಳನ್ನು ನೀಡಿದ್ದರು ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ಅದರ ಪ್ರಕಾರ ಆರೋಪಿಗಳು ಕರೆದುಕೊಂಡ ಹೋದ

ಜಾಗದಲ್ಲಿ ಮಹಜರ್ ಮಾಡುವಂತೆ ಹಾಗೂ ಆರೋಪಿಗಳು ಹಾಜರುಪಡಿಸಿದ ಸ್ವತ್ತುಗಳನ್ನು ಜಪ್ತಿಪಡಿಸಿಕೊಳ್ಳುವಂತೆ ನನಗೆ ಚಾಸಾ 16 ರವರು ನನಗೆ ನಿರ್ದೇಶನ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ಸ್ವಇಚ್ಛಾ ಹೇಳಿಕೆಗಳಲ್ಲಿ ಮೈಸೂರಿನ ಶಾಂತಿನಗರದ ಎ1 ಮಟನ್ ಸ್ಟಾಲ್, ಕಡವಿಬಾಚನಹಳ್ಳಿ, ದೇವರಮುದ್ದನಹಳ್ಳಿ, ಯಡೇಗೌಡನಹಳ್ಳಿ,, ಅರಕಲಗೂಡು ಠಾಣಾ ಸರಹದ್ದಿನ ಚಿಕ್ಕಗಾವನಹಳ್ಳಿ,, ಶ್ರವಣಬೆಳಗೊಳ ಠಾಣಾ ಸರಹದ್ದಿನ ಹಡೇನಹಳ್ಳಿ, ಚನ್ನರಾಯಪಟ್ಟಣ ಠಾಣಾ ಸರಹದ್ದಿನ ಚಿಕ್ಕಗೊಂಡನಹಳ್ಳಿ, ಚನ್ನರಾಯಪಟ್ಟಣ ಗ್ರಾಮಾ ಸರಹದ್ದಿನ ಬಳದರೆ, ಬಾಣಾವರ ಸರಹದ್ದಿನ ಚಲುವನಹಳ್ಳಿ, ತೆರ್ಪೆಗೌಡನಹಟ್ಟಿ ಗಂಡಸಿ ಠಾಣಾ ಸರಹದ್ದಿನ ಗಂಡಸಿ, ಬಸವಪುರದಹಟ್ಟಿ ನುಗ್ಗೆಹಳ್ಳಿ ಠಾಣಾ ಸರಹದ್ದಿನ ಅತ್ತೀಹಳ್ಳಿ ಮತ್ತು ಸಂತೇಶಿವರ ಗ್ರಾಮಗಳಲ್ಲಿ ಮಹಜರ್ ಮಾಡುವಂತೆ ಚಾಸಾ 16 ರವರು ನನಗೆ ನಿರ್ದೇಶನ ನೀಡಿದ್ದರು ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ.

ನಾನು ದಿಃ 07.01.2020 ರಂದು ತನಿಖೆಯನ್ನು ಮುಂದುವರೆಸಿ 2ನೇ ಆರೋಪಿ ನಮ್ಮನ್ನು ಹೊಳೆನರಸೀಪುರ ತಾಲ್ಲೂಕು, ಹಳ್ಳಿಮೈಸೂರು ಹೋಬಳಿ, ಯಡೇಗೌಡನಹಳ್ಳಿ ಗ್ರಾಮದ ಚಾಸಾ 1 ರವರ ವಾಸದ ಮನೆಯ ಹಿಂಭಾಗದಲ್ಲಿಯ ಕುರಿ ಕೂಡುವ ಕೊಟ್ಟಿಗೆಯ ಮುಂಭಾಗಕ್ಕೆ ಕರೆದುಕೊಂಡು ಹೋಗಿರುತ್ತಾನೆ ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ಪಂಚರಾದ ಚಾಸಾ 6 ಮತ್ತು 7 ರವರ ಸಮಕ್ಷಮ 2ನೇ ಆರೋಪಿ ಇದೇ ಸ್ಥಳದಲ್ಲಿ ತಾನು ಉಳಿದ ಆರೋಪಿತರೊಂದಿಗೆ ಕುರಿಗಳನ್ನು ಕಳ್ಳತನ ಮಾಡಿರುವುದಾಗಿ ತಿಳಿಸಿದರು ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ಬೆಳಗ್ಗೆ 8.15 ರಿಂದ 8.30 ರವರಗೆ ನಾನು ಸ್ಥಳ ಮಹಜರ್ ಕ್ರಮ ಜರುಗಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ಅದೇ ದಿನ ಚಾಸಾ 6 ಮತ್ತು 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ.

ದಿಃ 08.01.2020 ರಂದು ಪ್ರಕರಣದ ತನಿಖೆಯನ್ನು ಮುಂದುವರೆಸಿ ಚಾಸಾ 16 ರವರು ನೀಡಿದ ನಿರ್ದೇಶನದ ಮೇರೆಗೆ ಆರೋಪಿತರು ತೋರಿಸಿದ ಹಾಗೂ ಚಾಸಾ 16 ರವರು ನಿವೇದನಾ ಪತ್ರದಲ್ಲಿ ಹೇಳಿರುವ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಸ್ಥಳ ಮಹಜರ್ ಕ್ರಮಗಳನ್ನು ಪಂಚರ ಸಮಕ್ಷಮ ಜರುಗಿಸಿ ಪಂಚರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ನಂತರ ಮದ್ಯಾಹ್ನ 2.00 ಗಂಟೆಗೆ ಚಾಸಾ 16 ರವರ ಮುಂದೆ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ನಾನು 4ನೇ ಆರೊಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೇ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇದೆ.

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.